ಕರ್ನಾಟಕ ಸರ್ಕಾರ

ಹೇಳಿಕೆ ಹಾಳೆ
(ಆರ್.ಪಿ ಸಂಖ್ಯೆ 57)
ನಮೂನೆ ಸಂಖ್ಯೆ-4
(ಸಿವಿಲ್))

# ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ

**ಸಿ.ಸಿ.ನಂಃ101/2018**

ಚಾಸಾ ಃ 3 ಪ್ರಾ.ಸಾ ಃ 2

| | | |
|---|---|---|
| ಹೆಸರು | : | ನಾಗಮ್ಮ |
| ಗಂಡನ ಹೆಸರು | : | ಮನೋಹರ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ರುದನೂರ |
| ದಿನಾಂಕಃ | ಃ | 18-01-2019 ಸತ್ಯಪ್ರತಿಜ್ಞೆ ಮೇರಗೆ |

## ಮುಖ್ಯ ವಿಚಾರಣೆಃ- ಎ.ಪಿ.ಪಿ ಅವರಿಂದ ಃ-

ಚಾಸಾ-1, 3 ರಿಂದ 6 ರವರು ನನಗೆ ಗೊತ್ತು, ಚಾಸಾ-15 ರವರು ಸಹ ನನಗೆ ಗೊತ್ತು, ಈಗ್ಗೆ ಒಂದುವರೆ ವರ್ಷಗಳ ಹಿಂದೆ ಚಾಸಾ1 ರವರ ಮದುವೆ 1ನೇ ಆರೋಪಿಯ ಜೊತೆಗೆ ರಾಯಕೊಡ ಗ್ರಾಮದಲ್ಲಿ ಆಗಿರುತ್ತದೆ. ಚಾಸಾ-1 ಮತ್ತು ಆರೋಪಿತರ ನಡುವೆ ಜಗಳ ಆಗಿರುವುದನ್ನು ನಾನು ನೋಡಿರುವುದಿಲ್ಲ, ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ,

(ಮಾನ್ಯ ಎಪಿಪಿ ಅವರು ಸದರಿ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದರು. ವಾದ ಆಲಿಸಲಾಯಿತು ದಾಖಲಾತಿಗಳನ್ನು ಪರಿಶೀಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೊಡಲಾಯಿತು)

## ಪಾಟೀ ಸವಾಲುಃ- ಎ.ಪಿ.ಪಿ. ಅವರಿಂದಃ-

ದಿನಾಂಕ 10-10-2017 ರಂದು ಸಂಜೆ 7.00 ಗಂಟೆ ಸುಮಾರಿಗೆ 1 ಮತ್ತು 2ನೇ ಆರೋಪಿ ಕೂಡಿಕೊಂಡು ಚಾಸಾ-1 ರವರ ರಂಡಿ ಭೋಸಡಿ ಎಂದು ಬೈಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, 1 ಮತ್ತು 2ನೇ ಆರೋಪಿತರು ಚಾಸಾ-1 ರವರ ಜೊತೆ 2 ಲಕ್ಷ ರೂ. ಹಣ, 5 ತೊಲೆ ಬಂಗಾರ, ತವರು ಮನೆಯಿಂದ ತೆಗೆದುಕೊಂಡು ಬಾ ಅದು ನಮ್ಮ ಮನೆ ಕಟ್ಟಡಕ್ಕೆ ಸಹಾಯ ಆಗುತ್ತದೆಂದು ಜಗಳ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, ದಿನಾಂಕ 11-10-2017 ರಂದು ಬೆ.09ಃ30 ಗಂಟೆ ಸುಮಾರಿಗೆ 1ನೇ ಆರೋಪಿ ಕೆಲಸಕ್ಕೆ ಹೋಗಿದ್ದು, 2ನೇ ಆರೋಪಿ ಹೊರಗೆ ಹೋಗಿದ್ದು, ಆ ವೇಳೆಯಲ್ಲಿ ಚಾಸಾ-1 ರವರು ಮನೆಯಿಂದ ಹೊರಗೆ ಬಂದು ನನ್ನ ಗಂಡ ಮತ್ತು ಅತ್ತೆಗೆ ಬೈಯುತ್ತಾ ಇವರು ಕೊಡುವ ಕಿರುಕುಳ ನನಗೆ ಸಾಕಾಗಿದೆ, ನಾನು ಸತ್ತು ಹೋಗುತ್ತೇನೆ ಅಂತ ಮನೆಯೊಳಗೆ ಹೋಗಿ ತಟ್ಟಿ ಮುಚ್ಚುತ್ತಾ ತನ್ನ ಓಡ್ನಿಯಿಂದ ನೇಣು ಹಾಕಿಕೊಂಡಳು ಎಂದರೆ ನನಗೆ ಗೊತ್ತಿಲ್ಲ, ಆಗ ಚಾಸಾ-2 ರವರು ನನಗೆ ಮತ್ತು ಚಾಸಾ-4 ಮತ್ತು 5 ರವರಿಗೆ ಕರೆದು ಎಲ್ಲರೂ ಕೂಡಿ ಚಾಸಾ-1 ರವರ ನೇಣು ಬಿಡಿಸಿದೆವು ಎಂದರೆ ಸರಿಯಲ್ಲ, ಸದರಿ ವಿಷಯವನ್ನು ಚಾಸಾ-1 ರವರ ತಂದೆ ತಾಯಿಗೆ ತಿಳಿಸಲು ಚಾಸಾ-6 ರವರು ರಾಯಕೋಡ ಗ್ರಾಮಕ್ಕೆ ಹೋದನು ಎಂದರೆ ನನಗೆ ಗೊತ್ತಿಲ್ಲ, ಸ್ವಲ್ಪ ಸಮಯದ ನಂತರ ಚಾಸಾ-10, 11

ಮತ್ತು 14 ರವರು ಬಂದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರಿಗೆ ಚಾಸಾ10 ಮತ್ತು 14 ರವರು ಚಿಕಿತ್ಸೆ ಕುರಿತು ಸೇಡಂಗೆ ಕರೆದುಕೊಂಡು ಹೋದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಆರೋಪಿತರ ಕಿರುಕುಳ ತಾಳಲಾರದೇ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಘಟನೆಯ ಬಗ್ಗೆ ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಒಂದು ಓಡ್ನಿಯನ್ನು ತೋರಿಸಿ ಇದೇ ಓಡ್ನಿಯಿಂದ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ- ಆರೋಪಿತರ ಪರ ಶ್ರೀ ಎಸ್.ಬಿ.ಕೆ. ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

ಮರುವಿಚಾರಣೆ- ಇಲ್ಲ-

(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೆ. ಸರಿ ಇದೆ

ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ

ಕರ್ನಾಟಕ ಸರ್ಕಾರ

ಹೇಳಿಕೆ ಹಾಳೆ
(ಆರ್.ಪಿ ಸಂಖ್ಯೆ 57)
ನಮೂನೆ ಸಂಖ್ಯೆ-4
(ಸಿವಿಲ್))

**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ.ನಂಃ101/2018**

ಚಾಸಾ ಃ 2 ಪ್ರಾ.ಸಾ ಃ 1
ಹೆಸರು : ರಹೆಮತ್‌ಬಿ
ಗಂಡನ ಹೆಸರು : ಮಹ್ಮದ ಹನಿಫ್
ವಯಸ್ಸು : 38 ವರ್ಷ
ಉದ್ಯೋಗ : ಮನೆ ಕೆಲಸ
ವಾಸಸ್ಥಳ : ರುದನೂರ
ದಿನಾಂಕಃ ಃ 18-01-2019 ಸತ್ಯಪ್ರತಿಜ್ಞೆ ಮೇರಗೆ

**ಮುಖ್ಯ ವಿಚಾರಣೆಃ- ಎ.ಪಿ.ಪಿ ಅವರಿಂದ ಃ-**

ಚಾಸಾ-1 ರಿಂದ 6 ರವರು ನನಗೆ ಗೊತ್ತು. ಚಸಾ-15 ರವರು ಸಹ ನನಗೆ ಗೊತ್ತು, ಈಗ್ಗೆ ಒಂದುವರೆ ವರ್ಷಗಳ ಹಿಂದೆ ಚಾಸಾ1 ರವರ ಮದುವೆ 1ನೇ ಆರೋಪಿಯ ಜೊತೆಗೆ ರಾಯಕೊಡ ಗ್ರಾಮದಲ್ಲಿ ಆಗಿರುತ್ತದೆ. ಚಾಸಾ-1 ಮತ್ತು ಆರೋಪಿತರ ನಡುವೆ ಜಗಳ ಆಗಿರುವುದನ್ನು ನಾನು ನೋಡಿರುವುದಿಲ್ಲ, ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ,

(ಮಾನ್ಯ ಎಪಿಪಿ ಅವರು ಸದರಿ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದರು. ವಾದ ಆಲಿಸಲಾಯಿತು ದಾಖಲಾತಿಗಳನ್ನು ಪರಿಶೀಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೊಡಲಾಯಿತು)

**ಪಾಟೀ ಸವಾಲುಃ- ಎ.ಪಿ.ಪಿ. ಅವರಿಂದಃ-**

ದಿನಾಂಕ 10-10-2017 ರಂದು ಸಂಜೆ 7.00 ಗಂಟೆ ಸುಮಾರಿಗೆ 1 ಮತ್ತು 2ನೇ ಆರೋಪಿ ಕೂಡಿಕೊಂಡು ಚಾಸಾ-1 ರವರ ರಂಡಿ ಭೋಸಡಿ ಎಂದು ಬೈಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, 1 ಮತ್ತು 2ನೇ ಆರೋಪಿತರು ಚಾಸಾ-1 ರವರ ಜೊತೆ 2.00 ಲಕ್ಷ ರೂ. ಹಣ, 5-ತೋಲೆ ಬಂಗಾರ, ತವರು ಮನೆಯಿಂದ ತೆಗೆದುಕೊಂಡು ಬಾ ಅದು ನಮ್ಮ ಮನೆ ಕಟ್ಟಡಕ್ಕೆಸಹಾಯ ಆಗುತ್ತದೆಂದು ಜಗಳ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, ದಿನಾಂಕ 11-10-2017 ರಂದು ಬೆ.09ಃ30 ಗಂಟೆ ಸುಮಾರಿಗೆ 1ನೇ ಆರೋಪಿ ಕೆಲಸಕ್ಕೆ ಹೋಗಿದ್ದು, 2ನೇ ಆರೋಪಿ ಹೊರಗೆ ಹೋಗಿದ್ದು, ಆ ವೇಳೆಯಲ್ಲಿ ಚಾಸಾ-1 ರವರು ಮನೆಯಿಂದ ಹೊರಗೆ ಬಂದು ನನ್ನ ಗಂಡ ಮತ್ತು ಅತ್ತೆಗೆ ಬೈಯುತ್ತಾ ಇವರು ಕೊಡುವ ಕಿರುಕುಳ ನನಗೆ ಸಾಕಾಗಿದೆ, ನಾನು ಸತ್ತುಹೋಗುತ್ತೇನೆ, ಅಂತ ಮನೆಯೊಳಗೆ ಹೋಗಿ ತಟ್ಟಿ ಮುಚ್ಚುತ್ತಾ ತನ್ನ ಓಡ್ನಿಯಿಂದ ನೇಣು ಹಾಕಿಕೊಂಡಳು ಎಂದರೆ ನನಗೆ ಗೊತ್ತಿಲ್ಲ, ಆಗ ನಾನು ಮತ್ತು ಚಾಸಾ-3, 4, ಮತ್ತು 5 ರವರಿಗೆ ಕರೆದು ಎಲ್ಲರೂ ಕೂಡಿ ಚಾಸಾ-1 ರವರ ನೇಣು ಬಿಡಿಸಿದೆವು ಎಂದರೆ ಸರಿಯಲ್ಲ, ಸದರಿ ವಿಷಯವನ್ನು ಚಾಸಾ-1 ರವರ ತಂದೆ ತಾಯಿಗೆ ತಿಳಿಸಲು ಚಾಸಾ-6 ರವರು ರಾಯಕೋಡ ಗ್ರಾಮಕ್ಕೆ ಹೋದನು ಎಂದರೆ ನನಗೆ ಗೊತ್ತಿಲ್ಲ, ಸ್ವಲ್ಪ ಸಮಯದ ನಂತರ ಚಾಸಾ-10, 11 ಮತ್ತು 14

ರವರು ಬಂದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರಿಗೆ ಚಾಸಾ10 ಮತ್ತು 14 ರವರು ಚಿಕಿತ್ಸೆ ಕುರಿತು ಸೇಡಂಗೆ ಕರೆದುಕೊಂಡು ಹೋದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಆರೋಪಿತರ ಕಿರುಕುಳ ತಾಳಲಾರದೇ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-1 ಎಂದು ಗುರುತಿಸಲಾಯಿತು. ಘಟನೆಯ ಬಗ್ಗೆ ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಒಂದು ಓಡ್ನಿಯನ್ನು ತೋರಿಸಿ ಇದೇ ಓಡ್ನಿಯಿಂದ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎಸ್.ಬಿ.ಕೆ. ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

ಮರುವಿಚಾರಣೆ- ಇಲ್ಲ-

(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೆ. ಸರಿ ಇದೆ

ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ

ಕರ್ನಾಟಕ ಸರ್ಕಾರ

ಹೇಳಿಕೆ ಹಾಳೆ
(ಆರ್.ಪಿ ಸಂಖ್ಯೆ 57)
ನಮೂನೆ ಸಂಖ್ಯೆ-4
(ಸಿವಿಲ್))

## ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ

**ಸಿ.ಸಿ.ನಂಃ154/2018**

ಚಾಸಾ ಃ 2 ಪ್ರಾ.ಸಾ ಃ 1
ಹೆಸರು : ಮಹ್ಮದ ರಫೀಕ್
ತಂದೆಯ ಹೆಸರು : ಮಹ್ಮದ ಶಾಹಬೊದ್ದಿನ್
ವಯಸ್ಸು : 28 ವರ್ಷ
ಉದ್ಯೋಗ : ಖಾಸಗಿ ಕೆಲಸ
ವಾಸಸ್ಥಳ : ನಿಡಗುಂದಾ
ದಿನಾಂಕಃ ಃ 18-01-2019 ಸತ್ಯಪ್ರತಿಜ್ಞೆ ಮೇರಗೆ

**ಮುಖ್ಯ ವಿಚಾರಣೆಃ- ಎ.ಪಿ.ಪಿ ಅವರಿಂದ ಃ-**

ನಾನು ಮತ್ತು ನನ್ನ ತಂದೆ ಸುಮಾರು 20 ವರ್ಷಗಳಿಂದ ಪಂಚರಶಾಪ್ ಅಂಗಡಿ ನಡೆಸುತ್ತಿದ್ದೇವೆ. ಆರೋಪಿ ನನಗೆ ಗೊತ್ತಿಲ್ಲ, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಮಾನ್ಯ ಎಪಿಪಿ ಅವರು ಸದರಿ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದರು. ವಾದ ಆಲಿಸಲಾಯಿತು ದಾಖಲಾತಿಗಳನ್ನು ಪರಿಶೀಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೊಡಲಾಯಿತು)

**ಪಾಟೀ ಸವಾಲುಃ- ಎ.ಪಿ.ಪಿ. ಅವರಿಂದಃ-**

ದಿನಾಂಕ 18-11-2017 ರಂದು ಬೆಳಿಗ್ಗೆ 11.30 ಗಂಟೆ ಸುಮಾರಿಗೆ ನಾನು ಮತ್ತು ಚಾಸಾ-3 ರವರು ಕೂಡಿ ಅಂಗಡಿಯಲ್ಲಿ ಇದ್ದಾಗ ನಿಡಗುಂದಾ ಕಡೆಯಿಂದ ಒಂದು ಮೋಟರ್ ಸೈಕಲ್ ಮೇಲೆ ಇಬ್ಬರು ಕುಳಿತು ನಮ್ಮ ಅಂಗಡಿಯಿಂದ ಸುಮಾರು 50 ಮೀಟರ್ ಅಂತರದಲ್ಲಿ ಇದ್ದ ಕರಚಖೇಡಾ ಕ್ರಾಸ ಹತ್ತಿರ ಜಂಪ್‌ನಲ್ಲಿ ಹಾಕಿದ್ದರಿಂದ ಮೋಟರ ಸೈಕಲ್ ಹಿಂದೆ ಕುಳಿತ ವಯಸ್ಸಾದ ವ್ಯಕ್ತಿ ಕೆಳಗೆ ಬಿದ್ದನು ಎಂದರೆ ನನಗೆ ಗೊತ್ತಿಲ್ಲ, ಆಗ ನಾವು ಹತ್ತಿರ ಹೊಗಿ ನೋಡಲಾಗಿ ವಯಸ್ಸಾದ ವ್ಯಕ್ತಿ ನಮ್ಮ ಊರಿನ ಸಾಯಬಣ್ಣ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ, ಮೋಟರ್ ಸೈಕಲ್ ಚಲಾಯಿಸುತ್ತಿದ್ದ ವ್ಯಕ್ತಿ ಸಾಯಬಣ್ಣನ ಮೊಮ್ಮಗ ಯಲ್ಲಪ್ಪ ಆಗಿದ್ದನು ಎಂದರೆ ನನಗೆ ಗೊತ್ತಿಲ್ಲ, ಸಾಯಬಣ್ಣನಿಗೆ ನೋಡಲಾಗಿ ತಲೆಗೆ, ಭಾರಿ ರಕ್ತ ಗಾಯ ಮತ್ತು ಬಲಭುಜದ ಹಿಂಭಾಗದಲ್ಲಿ ತರಚಿದ ಹಾಗೂ ಬಲಪಕ್ಕೆಯಲ್ಲಿ ರಕ್ತ ಮತ್ತು ಗುಪ್ತಗಾಯಗಳು ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ, ಮೋಟರ್ ಸೈಕಲ್ ನೋಡಲಾಗಿ ಅದರ ಸಂಖ್ಯೆಃ ಕೆಎ-32 ಇಬಿ-6207 ಆಗಿತ್ತು ಎಂದರೆ ನನಗೆ ಗೋತ್ತಿಲ್ಲ, ಆಗ ಆರೋಪಿ ತನ್ನ ಮಾವ ಶರಣಬಸಪ್ಪನಿಗೆ ಫೋನ್ ಮಾಡಿ ವಿಷಯ ತಿಳಿಸಿದನು ಎಂದರೆ ನನಗೆ ಗೊತ್ತಿಲ್ಲ, ಸ್ವಲ್ಪ ಸಮಯದ ನಂತರ ಚಾಸಾ-1, ಚಾಸಾ-4,6 ಮತ್ತು 7 ರವರು ಘಟನಾ ಸ್ಥಳಕ್ಕೆ ಬಂದರು ಎಂದರೆ ನನಗೆ ಗೊತ್ತಿಲ್ಲ, ನಂತರ

ಸಾಯಬಣ್ಣನನ್ನು ಅಂಬುಲೆನ್ಸನಲ್ಲಿ ಗುಲಬರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿ ಹೋದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮೋಟರ್ ಸೈಕಲ್‌ನ್ನು ವೇಗವಾಗಿ ಚಲಾಯಿಸಿ ಜಂಪಿನಲ್ಲಿ ಹಾಕಿದ್ದರಿಂದ ಸಾಯಪ್ಪ ಕೆಳಗೆ ಬಿದ್ದು ಗಾಯ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು ನಿಪಿ-1 ಎಂದು ಗುರುತಿಸಲಾಯಿತು. ನಂತರ ನನಗೆ ಸಾಯಪ್ಪನನ್ನು ಬಸವೇಶ್ವರ ಆಸ್ಪತ್ರೆಯಿಂದ ಬಿಡುಗಡೆ ಮಾಡಿ ಸೇಡಂ ಸರಕಾರಿ ಆಸ್ಪತ್ರೆಗೆ ತಂದು ಸೇರಿಸಿದ್ದು ದಿನಾಂಕಃ 25-11-2017 ರಂದು ಚಿಕಿತ್ಸೆ ಫಲಕಾರಿಯಾಗದೆ ಸಂಜೆ 6.15 ಕ್ಕೆ ಮೃತಪಟ್ಟಿದ್ದಾರೆ ಎಂದು ಗೊತ್ತಾಗಿದೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದಲೆ ಅಪಘಾತ ಆಗಿ ಸಾಯಪ್ಪ ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ದಿನಾಂಕಃ 26-11-2017 ರಂದು ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಮರು ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಆ ದಿನ ಆರೋಪಿ ವಾಹನ ಚಲಾಯಿಸುತ್ತಿದ್ದನು ನನಗೆ ಗೊತ್ತಿಲ್ಲ. ಆರೋಪಿ ಅಪಘಾತ ಮಾಡಿರುವ ವಿಚಾರ ಗೊತ್ತಿದ್ದರೂ ಸಹ ಆತನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎಂ.ಎಸ.ಎಸ. ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ. ಃ-**

ಮರುವಿಚಾರಣೆ- ಇಲ್ಲ-

(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೆ. ಸರಿ ಇದೆ

ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ